# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **613** |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-07-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 2020 ರಿಂದ ಈವರೆಗೆ ವಿದ್ಯುತ್ ಅವಘಡಗಳಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ಇವರಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವರ್ಷವಾರು ವಿದ್ಯುತ್ ಸರಬರಾಜು ಕಂಪನಿಗಳವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಆರ್ಥಿಕ ವರ್ಷ 2020-21 ರಿಂದ 2024-25ನೇ ಸಾಲಿನ ಜೂನ್ 24ರ ಅಂತ್ಯಕ್ಕೆ ಕ.ವಿ.ಪ್ರ.ನಿ.ನಿ. ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟವರ (ಮನುಷ್ಯ ಮತ್ತು ಜಾನುವಾರು) ಸಂಖ್ಯೆಯ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಇದೇ ಅವಧಿಯಲ್ಲಿ ಜೀವ ಕಳೆದುಕೊಂಡ ಪ್ರಾಣಿಗಳ ಸಂಖ್ಯೆ ಎಷ್ಟು; (ವರ್ಷವಾರು ವಿದ್ಯುತ್ ಸರಬರಾಜು ಕಂಪನಿಗಳವಾರು ಸಂಪೂರ್ಣ ಮಾಹಿತಿ ನೀಡುವುದು) | |
| ಇ) | ವಿದ್ಯುತ್ ಪ್ರವಹಿಸುವ ವಾಹಕಗಳು, ಉಪಕರಣಗಳ ಸ್ಪರ್ಶದಿಂದಾಗಿ ಜೀವ ಕಳೆದುಕೊಂಡವರ ಸಂಖ್ಯೆ ಎಷ್ಟು; ಹಾಗೂ ನೆಲಕ್ಕೆ ತಾಕಿದ/ಬಿದ್ದಿದ್ದ ತಂತಿಗಳು ತಾಕಿ ಪ್ರಾಣ ಕಳೆದುಕೊಂಡ ಮತ್ತು ಗಾಯಗೊಂಡ ಜನರು ಮತ್ತು ಜೀವ ಕಳೆದುಕೊಂಡ ಪ್ರಾಣಿಗಳ ಸಂಖ್ಯೆ ಎಷ್ಟು; | ವಿದ್ಯುತ್ ಪ್ರವಹಿಸುವ ವಾಹಕಗಳು, ಉಪಕರಣಗಳ ಸ್ಪರ್ಶದಿಂದಾಗಿ ಜೀವ ಕಳೆದುಕೊಂಡಿರುವವರ ಮತ್ತು ವಿದ್ಯುತ್ ತಂತಿಗಳು ತುಂಡಾಗಿ ಬಿದ್ದು ಜೀವ ಕಳೆದುಕೊಂಡವರ ಮತ್ತು ಗಾಯಗೊಂಡ ಮನುಷ್ಯರ ಮತ್ತು ಜೀವ ಕಳೆದುಕೊಂಡ ಪ್ರಾಣಿಗಳ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |
| ಈ) | ವಿದ್ಯುತ್ ಅವಘಡಗಳಲ್ಲಿ ವ್ಯಕ್ತಿ ಅಥವಾ ಪ್ರಾಣಿಗಳು ಮೃತಪಟ್ಟ ಮನುಷ್ಯ ಶಾಶ್ವತ ಅಂಗವೈಕಲ್ಯತೆಗೆ ಒಳಗಾದರೆ ನೀಡುವ ಪರಿಹಾರ ಮೊತ್ತ ಎಷ್ಟು; | ವಿದ್ಯುತ್ ಅವಘಡಗಳಲ್ಲಿ ವ್ಯಕ್ತಿ ಅಥವಾ ಪ್ರಾಣಿಗಳು ಮೃತಪಟ್ಟರೆ ಮನುಷ್ಯ ಶಾಶ್ವತ ಅಂಗವೈಕಲ್ಯತೆಗೆ ಒಳಗಾದರೆ ನೀಡುವ ಪರಿಹಾರ ಮೊತ್ತದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಉ) | ವಿದ್ಯುತ್ ಆಕಸ್ಮಿಕ ಅವಘಡಗಳಿಗೆ ಕಾರಣಗಳೇನು? | ವಿದ್ಯುತ್ ಅವಘಡಗಳು ಕೆಳಗೆ ತಿಳಿಸಿರುವ ಕಾರಣಗಳಿಂದ ಸಂಭವಿಸಿರುತ್ತದೆ.<br>• ಮಾನವ ಅಚಾತುರ್ಯದಿಂದ ಚಾಲನೆಯಲ್ಲಿರುವ ವಿದ್ಯುತ್ ತಂತಿ ಸ್ಪರ್ಶದಿಂದ.<br>• ತುಂಡಾಗಿ ಬಿದ್ದ ಚಾಲನೆಯಲ್ಲಿರುವ ವಿದ್ಯುತ್ ತಂತಿ ಸ್ಪರ್ಶದಿಂದ / ತುಳಿದು ವಿದ್ಯುತ್ ಅಪಘಾತ ಸಂಭವಿಸಬಹುದು.<br>• ಪರಿವರ್ತಕ ಕೇಂದ್ರ & ಕಂಬಗಳ ಬಳಿ ಲಿಕೇಜ್ ಕರೆಂಟನಿಂದ ವಿದ್ಯುತ್ ಅಪಘಾತ ಸಂಭವಿಸಬಹುದು.<br>• ಸುರಕ್ಷತಾ ಮುಂಜಾಗ್ರತಾ ಕ್ರಮಗಳು ಅನುಸರಿಸದೇ ಇರುವುದರಿಂದ .<br>• ಚಾಲನೆಯಲ್ಲಿರುವ ವಿದ್ಯುತ್ ವಾಹಕ (ಹೆಚ್.ಟಿ/ಎಲ್.ಟಿ) ಮಾರ್ಗಗಳ ಬಳಿಯಲ್ಲಿ ಕಬ್ಬಿಣದ ಸರಳು, ತಗಡು ಅಥವಾ ಇತರೇ ವಿದ್ಯುತ್‌ವಾಹಕಗೊಳ್ಳುವ ಸಾಮಗ್ರಿಗಳನ್ನು ಸಾಗಿಸುವಾಗ ಅಚಾತುರ್ಯದಿಂದ ಚಾಲನೆಯಲ್ಲಿರುವ ವಿದ್ಯುತ್ ತಂತಿ ಸ್ಪರ್ಶದಿಂದ.<br>• ವಿದ್ಯುತ್ ಉಪಕರಣಗಳನ್ನು ಉಪಯೋಗಿಸುವಾಗ ಪೂರ್ಣ ತಿಳುವಳಿಕೆ ಇಲ್ಲದೇ ವಿದ್ಯುತ್ ಸಂಪರ್ಕಕ್ಕೆ ಬರುವುದು.<br>• ಮಳೆ ಗಾಳಿಯಿಂದ ವಿದ್ಯುತ್ ಕಂಬಗಳು ಬಾಗಿ ಅಡ್ಡ ಪಟ್ಟಿ ಸಡಿಲಗೊಂದು ಅಥವಾ ತಂತಿ ಹರಿದು ಬಿದ್ದು ವಿದ್ಯುತ್ ಪ್ರವಹಿಸುವ ತಂತಿಯ ಸಂಪರ್ಕಕ್ಕೆ ಬಂದು ಅವಘಡ ಸಂಭವಿಸಬಹುದು.<br>• ಗ್ರಾಹಕರ ವಿದ್ಯುತ್ ಸ್ಥಾವರಗಳಲ್ಲಿ ಮತ್ತು ವಿದ್ಯುತ್ ಸರಬರಾಜು ಜಾಲ ವ್ಯವಸ್ಥೆಯಲ್ಲಿ ವಿದ್ಯುತ್ ಸುರಕ್ಷತಾ ನಿಯಮಗಳು ಉಲ್ಲಂಘನೆಯಾಗಿರುವ ಸಂದರ್ಭಗಳಲ್ಲಿ.<br>• ಅನಧಿಕೃತವಾಗಿ ವಿದ್ಯುತ್ ಕೆಲಸಗಳಲ್ಲಿ ತೊಡಗಿಕೊಂಡಿದ್ದಾಗ ಮತ್ತು ಅನಧಿಕೃತ ಲೈನ್ ಎಳೆಯುವಾಗ ಇತ್ಯಾದಿ.,<br>• ಬೀದಿ ದೀಪದ ವಿದ್ಯುತ್ ಸೋರಿಕೆಯಿಂದ ಮತ್ತು ಬಾಹ್ಯ ಉಪಕರಣಗಳು ಭೂ ಸಂಪರ್ಕಕ್ಕೆ ಒಳಗಾಗದೇ ಇರುವ ಸಂದರ್ಭಗಳಲ್ಲಿ ಸೋರಿಕೆ ವಿದ್ಯುತ್ ಪ್ರುವಹಿಸಿ ಅವಘಡಗಳು ಸಂಭವಿಸಿರುತ್ತವೆ.<br>• ವಿದ್ಯುತ್ ಮಾರ್ಗಗಳಿಂದ ಸಮಾನಾಂತರ ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳದೇ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡುವ ಸಂದರ್ಭದಲ್ಲಿ.<br>• ಸುರಕ್ಷತಾ ಕ್ರಮ ಪಾಲಿಸದೆ ವಿದ್ಯುತ್ ಗುತ್ತಿಗೆದಾರರ ಅಡಿಯಲ್ಲಿ ವಿದ್ಯುತ್ ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುವಾಗ ಅವಘಡಗಳು ಸಂಭವಿಸಿರುತ್ತದೆ. |

ಸಂಖ್ಯೆ: ಎನರ್ಜಿ 194 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613ಕ್ಕೆ ಅನುಬಂಧ-1**

**ಆರ್ಥಿಕ ವರ್ಷ 2020-21 ರಿಂದ 2024-25 (ಜೂನ್ 24ರ ಅಂತ್ಯಕ್ಕೆ) ಕವಿಪ್ರನಿನಿ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟವರ (ಮನುಷ್ಯ ಮತ್ತು ಪ್ರಾಣಿ) ವಿವರಗಳು**

| ಆರ್ಥಿಕ ವರ್ಷ | ಮೃತಪಟ್ಟ ಮನುಷ್ಯರ ಸಂಖ್ಯೆ | | | ಮೃತಪಟ್ಟ ಜಾನುವಾರು ಸಂಖ್ಯೆ |
|---|---|---|---|---|
| | ಇಲಾಖೆ ಸಿಬ್ಬಂದಿ ಸಂಖ್ಯೆ | ಇಲಾಖೇತರ ಸಿಬ್ಬಂದಿ ಸಂಖ್ಯೆ | ಒಟ್ಟು | |
| 2020-21 | 2 | 11 | **13** | 0 |
| 2021-22 | 1 | 16 | **17** | 1 |
| 2022-23 | 1 | 13 | **14** | 0 |
| 2023-24 | 1 | 13 | **14** | 0 |
| 2024-25 (ಜೂನ್ 24ರ ಅಂತ್ಯಕ್ಕೆ) | 0 | 2 | **2** | 0 |

**ಆರ್ಥಿ ವರ್ಷ 2020-21 ರಿಂದ 2024-25 (ಜೂನ್ 24ರ ಅಂತ್ಯಕ್ಕೆ) ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟವರ (ಮನುಷ್ಯ ಮತ್ತು ಪ್ರಾಣಿ) ವಿವರಗಳು**

| ಆರ್ಥಿಕ ವರ್ಷ | ಕಂಪನಿ ಹೆಸರು | ಮೃತಪಟ್ಟ ಮನುಷ್ಯರ ಸಂಖ್ಯೆ | | | ಮೃತಪಟ್ಟ ಜಾನುವಾರು ಸಂಖ್ಯೆ |
|---|---|---|---|---|---|
| | | ಇಲಾಖೆ ಸಿಬ್ಬಂದಿ ಸಂಖ್ಯೆ | ಇಲಾಖೇತರ ಸಿಬ್ಬಂದಿ ಸಂಖ್ಯೆ | ಒಟ್ಟು | |
| **2020-21** | ಬೆ.ವಿ.ಕಂ | 4 | 56 | 60 | 54 |
| | ಮ.ವಿ.ಕಂ | 4 | 61 | 65 | 120 |
| | ಚಾ.ವಿ.ಸ.ನಿ.ನಿ | 3 | 46 | 49 | 111 |
| | ಹು.ವಿ.ಕಂ | 2 | 123 | 125 | 152 |
| | ಗು.ವಿ.ಕಂ | 3 | 127 | 130 | 275 |
| **2021-22** | ಬೆ.ವಿ.ಕಂ | 7 | 101 | 108 | 59 |
| | ಮ.ವಿ.ಕಂ | 3 | 64 | 67 | 101 |
| | ಚಾ.ವಿ.ಸ.ನಿ.ನಿ | 3 | 59 | 62 | 84 |
| | ಹು.ವಿ.ಕಂ | 3 | 131 | 134 | 119 |
| | ಗು.ವಿ.ಕಂ | 1 | 99 | 100 | 204 |

| | | | | | |
|---|---|---|---|---|---|
| 2022-23 | ಬೆ.ವಿ.ಕಂ | 6 | 128 | 134 | 82 |
| | ಮ.ವಿ.ಕಂ | 7 | 60 | 67 | 133 |
| | ಚಾ.ವಿ.ಸ.ನಿ.ನಿ | 6 | 66 | 72 | 117 |
| | ಹು.ವಿ.ಕಂ | 4 | 118 | 122 | 151 |
| | ಗು.ವಿ.ಕಂ | 1 | 98 | 99 | 215 |
| 2023-24 | ಬೆ.ವಿ.ಕಂ | 3 | 115 | 118 | 61 |
| | ಮ.ವಿ.ಕಂ | 7 | 49 | 56 | 83 |
| | ಚಾ.ವಿ.ಸ.ನಿ.ನಿ | 6 | 38 | 44 | 74 |
| | ಹು.ವಿ.ಕಂ | 7 | 129 | 136 | 179 |
| | ಗು.ವಿ.ಕಂ | 3 | 90 | 93 | 270 |
| 2024-25 (ಜೂನ್ 24ರ ಅಂತ್ಯ) | ಬೆ.ವಿ.ಕಂ | 3 | 47 | 50 | 23 |
| | ಮ.ವಿ.ಕಂ | 2 | 24 | 26 | 42 |
| | ಚಾ.ವಿ.ಸ.ನಿ.ನಿ | 1 | 22 | 23 | 27 |
| | ಹು.ವಿ.ಕಂ | 1 | 60 | 61 | 67 |
| | ಗು.ವಿ.ಕಂ | 2 | 6 | 8 | 46 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613ಕ್ಕೆ ಅನುಬಂಧ-2**

**ಆರ್ಥಿ ವರ್ಷ 2020-21 ರಿಂದ 2024-25 (ಜೂನ್ 24ರ ಅಂತ್ಯಕ್ಕೆ) ಕವಿಪ್ರನಿನಿ ವ್ಯಾಪ್ತಿಯಲ್ಲಿ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟವರ (ಮನುಷ್ಯ ಮತ್ತು ಪ್ರಾಣಿ) ವಿವರಗಳು**

| ಆರ್ಥಿಕ ವರ್ಷ | ವಾಹಕ / ಉಪಕರಣಗಳ ಸ್ಪರ್ಶದಿಂದ | ತಂತಿ ತುಂಡಾಗಿ | | ಮೃತಪಟ್ಟ ಜಾನುವಾರು ಸಂಖ್ಯೆ |
|---|---|---|---|---|
| | ಮೃತಪಟ್ಟ ಮನುಷ್ಯರ ಸಂಖ್ಯೆ | ಮೃತಪಟ್ಟ ಮನುಷ್ಯರ ಸಂಖ್ಯೆ | ಗಾಯಗೊಂಡ ಮನುಷ್ಯರ ಸಂಖ್ಯೆ | |
| 2020-21 | 13 | 0 | 0 | 0 |
| 2021-22 | 17 | 0 | 0 | 0 |
| 2022-23 | 14 | 0 | 0 | 0 |
| 2023-24 | 14 | 0 | 0 | 0 |
| 2024-25 (ಜೂನ್ 24ರ ಅಂತ್ಯಕ್ಕೆ) | 2 | 0 | 0 | 0 |

**ಆರ್ಥಿ ವರ್ಷ 2020-21 ರಿಂದ 2024-25 (ಜೂನ್ 24ರ ಅಂತ್ಯಕ್ಕೆ) ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಸಂಭವಿಸಿದ ವಿದ್ಯುತ್ ಅವಘಡಗಳಲ್ಲಿ ಮೃತಪಟ್ಟವರ (ಮನುಷ್ಯ ಮತ್ತು ಪ್ರಾಣಿ) ವಿವರಗಳು**

| ಆರ್ಥಿಕ ವರ್ಷ | ಕಂಪನಿ ಹೆಸರು | ವಾಹಕ / ಉಪಕರಣಗಳ ಸ್ಪರ್ಶದಿಂದ | ತಂತಿ ತುಂಡಾಗಿ | | ಮೃತಪಟ್ಟ ಜಾನುವಾರು ಸಂಖ್ಯೆ |
|---|---|---|---|---|---|
| | | ಮೃತಪಟ್ಟ ಮನುಷ್ಯರ ಸಂಖ್ಯೆ | ಮೃತಪಟ್ಟ ಮನುಷ್ಯರ ಸಂಖ್ಯೆ | ಗಾಯಗೊಂಡ ಮನುಷ್ಯರ ಸಂಖ್ಯೆ | |
| 2020-21 | ಬೆ.ವಿ.ಕಂ | 51 | 9 | 3 | 54 |
| | ಮ.ವಿ.ಕಂ | 61 | 4 | 1 | 120 |
| | ಚಾ.ವಿ.ಸ.ನಿ.ನಿ | 24 | 5 | 3 | 93 |
| | ಹು.ವಿ.ಕಂ | 97 | 20 | 10 | 113 |
| | ಗು.ವಿ.ಕಂ | 32 | 43 | 6 | 178 |
| 2021-22 | ಬೆ.ವಿ.ಕಂ | 95 | 13 | 2 | 59 |
| | ಮ.ವಿ.ಕಂ | 58 | 6 | 1 | 97 |
| | ಚಾ.ವಿ.ಸ.ನಿ.ನಿ | 17 | 11 | 1 | 73 |
| | ಹು.ವಿ.ಕಂ | 100 | 10 | 7 | 97 |
| | ಗು.ವಿ.ಕಂ | 20 | 36 | 2 | 148 |

| | | | | | |
|---|---|---|---|---|---|
| 2022-23 | ಬೆ.ವಿ.ಕಂ | 115 | 19 | 2 | 82 |
| | ಮ.ವಿ.ಕಂ | 56 | 8 | 0 | 132 |
| | ಚಾ.ವಿ.ಸ.ನಿ.ನಿ | 26 | 14 | 5 | 128 |
| | ಹು.ವಿ.ಕಂ | 87 | 18 | 9 | 129 |
| | ಗು.ವಿ.ಕಂ | 5 | 42 | 3 | 149 |
| 2023-24 | ಬೆ.ವಿ.ಕಂ | 108 | 10 | 2 | 61 |
| | ಮ.ವಿ.ಕಂ | 48 | 7 | 0 | 78 |
| | ಚಾ.ವಿ.ಸ.ನಿ.ನಿ | 19 | 5 | 3 | 68 |
| | ಹು.ವಿ.ಕಂ | 108 | 12 | 6 | 147 |
| | ಗು.ವಿ.ಕಂ | 27 | 23 | 5 | 187 |
| 2024-25 (ಜೂನ್ 24ರ ಅಂತ್ಯಕ್ಕೆ) | ಬೆ.ವಿ.ಕಂ | 47 | 3 | 0 | 23 |
| | ಮ.ವಿ.ಕಂ | 20 | 6 | 1 | 42 |
| | ಚಾ.ವಿ.ಸ.ನಿ.ನಿ | 6 | 8 | 0 | 33 |
| | ಹು.ವಿ.ಕಂ | 45 | 8 | 6 | 55 |
| | ಗು.ವಿ.ಕಂ | 2 | 0 | 2 | 41 |

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613ಕ್ಕೆ ಅನುಬಂಧ-3

ವಿದ್ಯುತ್ ಅವಘಡಗಳಲ್ಲಿ ವ್ಯಕ್ತಿ ಅಥವಾ ಪ್ರಾಣಿಗಳು ಮೃತಪಟ್ಟರೆ ಮನುಷ್ಯ ಶಾಶ್ವತ ಅಂಗವೈಕಲ್ಯತೆಗೆ ಒಳಗಾದರೆ ನೀಡುವ ಪರಿಹಾರ ಮೊತ್ತದ ವಿವರಗಳು:

| ಕ್ರ. ಸಂ. | ಅಪಘಾತದ ವಿವರ | ಕ.ವಿ.ಪ್ರ.ನಿ.ನಿ /ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಪಾವತಿಸಲಾಗುತ್ತಿರುವ ಪರಿಹಾರದ ಮೊತ್ತ (ಕವಿಪ್ರನಿನಿ/ಬಿ7/2476/1995-96 ಸಂ.1 ಬೆಂಗಳೂರು ದಿನಾಂಕ 09-11-2017ರ ಆದೇಶದ ಮೇರೆಗೆ) |
|---|---|---|
| 1 | ಮಾರಣಾಂತಿಕ – ಮನುಷ್ಯ | ಮನುಷ್ಯ ಜೀವ ಹಾನಿ (ಮಾರಣಾಂತಿಕ) – ಒಬ್ಬ ವ್ಯಕ್ತಿಗೆ ರೂ. 5.00 ಲಕ್ಷ (ಐದು ಲಕ್ಷ ರೂ.ಗಳು ಮಾತ್ರ) |
| 2 | ಮಾರಣಾಂತಿಕ – ಪ್ರಾಣಿ | ಪ್ರಾಣಿಗಳ ಜೀವ ಹಾನಿಗೆ ಪರಿಹಾರ ಮೊತ್ತ – ಒಂದು ಪ್ರಾಣಿ (ರೂ. 50,000/- ಕ್ಕೆ ಮೀರದಂತೆ (ಐವತ್ತು ಸಾವಿರ ರೂ.ಗಳು ಮಾತ್ರ) (ಅಂತಹ ಪ್ರಾಣಿಗೆ ಪಾವತಿಸಲಾಗುವ ಸಮರ್ಥನೀಯ ಪರಿಹಾರವನ್ನು ಸಕ್ಷಮ ಪ್ರಾಧಿಕಾರದವರಿಂದ ದೃಢೀಕರಣವನ್ನು ಪಡೆಯುವ ಷರತ್ತಿನ ಮೇಲೆ) |
| 3 | ಶಾಶ್ವತ ಪೂರ್ಣ ಅಂಗವಿಕಲತೆ | ಒಬ್ಬ ವ್ಯಕ್ತಿಯು ಈ ಅಪಘಾತದಿಂದ ಶಾಶ್ವತ ಪೂರ್ಣ ಅಂಗವಿಕಲತೆ ಹೊಂದಿದ್ದರೆ – ಪಾವತಿಸಬೇಕಾದ ಪರಿಹಾರ ಮೊತ್ತ – ಒಬ್ಬ ವ್ಯಕ್ತಿಗೆ ರೂ. 5.00 ಲಕ್ಷ (ಐದು ಲಕ್ಷ ರೂ.ಗಳು) |
| 4 | ಶಾಶ್ವತ ಭಾಗಶ: ಅಂಗವಿಕಲತೆ | ಒಬ್ಬ ವ್ಯಕ್ತಿಯು ಈ ಅಪಘಾತದಿಂದ ಶಾಶ್ವತ ಭಾಗಶ: ಅಂಗವಿಕಲತೆ ಹೊಂದಿದ್ದರೆ – ಪಾವತಿಸಬೇಕಾದ ಪರಿಹಾರ ಮೊತ್ತ – ಅಂಗವಿಕಲತೆಯ ಶೇಕಡಾವಾರು ಸಮಾನವಾಗಿ – ಗರಿಷ್ಟ ಮೊತ್ತ ರೂ.5.00 ಲಕ್ಷದೊಳಗೆ (ಐದು ಲಕ್ಷ ರೂ.ಗಳು ಮಾತ್ರ) ಮತ್ತು ಕನಿಷ್ಟ ರೂ. 1.00 ಲಕ್ಷ (ಒಂದು ಲಕ್ಷ ರೂ.ಗಳು ಮಾತ್ರ) |
| 5 | ದು:ಖಕರವಾದ ಗಾಯ | ಭಾರತೀಯ ದಂಡ ಸಂಹಿತೆ ಸೆಕ್ಷನ್ 320 ರಲ್ಲಿ ಹೇಳಿರುವಂತೆ ಒಬ್ಬ ವ್ಯಕ್ತಿಯು ಈ ಅಪಘಾತದಿಂದ ಗಾಯಗೊಂಡು ದು:ಖಕ್ಕೆ ಒಳಗಾಗಿದ್ದರ ಪರಿಹಾರ ಮೊತ್ತ – ಗರಿಷ್ಟ ರೂ. 1.00 ಲಕ್ಷ (ಒಂದು ಲಕ್ಷ ರೂ.ಗಳು ಮಾತ್ರ) |
| 6 | ಗಾಯ / ಬಾಧೆ | ಭಾರತೀಯ ದಂಡ ಸಂಹಿತೆ ಸೆಕ್ಷನ್ 319 ರಲ್ಲಿ ಹೇಳಿರುವಂತೆ ಒಬ್ಬ ವ್ಯಕ್ತಿಯು ಗಾಯಗೊಂಡು ಬಾಧೆ ಪಡುತ್ತಿದ್ದರೆ – ಪರಿಹಾರ ಮೊತ್ತ ಗರಿಷ್ಟ ರೂ. 20,000/- (ಇಪ್ಪತ್ತು ಸಾವಿರ ರೂ.ಗಳು ಮಾತ್ರ) |
| 7 | ತಾತ್ಕಾಲಿಕ ಪೂರ್ಣ ಅಂಗವಿಕಲತೆ | ಯಾವುದೇ ಅವಧಿಯಲ್ಲಿ ತೀವ್ರ ಬಾಧೆಯು ಪೂರ್ಣ ಅಂಗವಿಕಲತೆಗೆ ಕಾರಣವಾದಲ್ಲಿ ಪಾವತಿಸಬೇಕಾದ ಪರಿಹಾರ ಮೊತ್ತ – ಕನಿಷ್ಟ ರೂ. 50,000/- (ಐವತ್ತು ಸಾವಿರ ರೂ. ಗಳು ಮಾತ್ರ) ಗರಿಷ್ಟ ರೂ. 1.00 ಲಕ್ಷ (ಒಂದು ಲಕ್ಷ ರೂ.ಗಳು ಮಾತ್ರ) |
| 8 | ತಾತ್ಕಾಲಿಕ ಭಾಗಶ: ಅಂಗವಿಕಲತೆ | ಸಂಭವಿದಂತಹ ತೀವ್ರ ಗಾಯವು 15 ದಿನಗಳೊಳಗಿಂತ ಕಡಿಮೆ ಇಲ್ಲದೆ ತಾತ್ಕಾಲಿಕ ಅಂಗವಿಕಲತೆಗೆ ಕಾರಣವಾದಲ್ಲಿ, ಪಾವತಿಸಬೇಕಾದ ಪರಿಹಾರ ಮೊತ್ತ – ಕನಿಷ್ಟ ರೂ. 25,000/- (ಇಪ್ಪತ್ತೈದು ಸಾವಿರ ರೂ.ಗಳು ಮಾತ್ರ) ಗರಿಷ್ಟ ರೂ. 50,000/- (ಐವತ್ತು ಸಾವಿರ ರೂ.ಗಳು ಮಾತ್ರ) |
| 9 | ವೈದ್ಯಕೀಯ ವೆಚ್ಚಗಳು | ವಿದ್ಯುಚ್ಛಕ್ತಿ ಅಪಘಾತದಿಂದ ಸಂಭವಿಸುವ ಗಾಯಗಳ ಚಿಕಿತ್ಸೆಗಾಗಿ ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಉಳಿಯುವ ಅವಧಿಗೆ ಸಂಬಂಧಿಸಿದ ನಿಖರವಾದ ವೆಚ್ಚಗಳನ್ನು ಗಾಯಗೊಂಡ ವ್ಯಕ್ತಿಗೆ ಅಥವಾ ಮೃತರ ವಾರಸುದಾರರಿಗೆ, ಪ್ರಕರಣಕ್ಕನುಗುಣವಾಗಿ, ಮೇಲಿನ ಪರಿಹಾರದ ಮೊತ್ತದ ಜೊತೆಗೆ ಪಾವತಿಸುವುದು |